ಸೊರಬ ಪಟ್ಟಣದ ಮುಖ್ಯ ರಸ್ತೆ ಅಗಲೀಕರಣ

5362 (5420(; ಶ್ರೀ ಮಧು ಬಂಗಾರಪ್ಪ ಎಸ್. (ಸೊರಬ)

ಅ) ಕಳೆದ ಮೂರು ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯಿಂದ ಸೊರಬ ವಿಧಾನಸಭಾ ಕ್ಷೇತ್ರದ ರಸ್ತೆ ಮತ್ತು ಸೇತುವೆಗಳ ನಿರ್ಮಾಣಕ್ಕಾಗಿ ಸರ್ಕಾರ ನಿಗಧಿಪಡಿಸಿ ಬಿಡುಗಡೆ ಮಾಡಿರುವ ಅನುದಾನವೆಷ್ಟು (ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು);

ಆ) ಸೊರಬ ವಿಧಾನಸಭಾ ವ್ಯಾಪ್ತಿಯ ಸೊರಬ ಪಟ್ಟಣದ ಮುಖ್ಯ ರಸ್ತೆ ಅಗಲೀಕರಣಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸೊರಬ ಪಟ್ಟಣದ ಮುಖ್ಯ ರಸ್ತೆ ಅಗಲೀಕರಣಕ್ಕಾಗಿ ನಿಗಧಿಪಡಿಸಿರುವ ಅನುದಾನದ ಮೊತ್ತವೆಷ್ಟು; ಕಾಮಗಾರಿಯನ್ನು ಯಾವಾಗ ಕೈಗೊಳ್ಳಲಾಗುವುದು (ವಿವರವಾದ ಮಾಹಿತಿ ನೀಡುವುದು);

ಈ) ಹಾಗಿಲ್ಲದಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಈ ರಸ್ತೆಗಳನ್ನು ಅಗಲೀಕರಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ಸರ್ಕಾರಕ್ಕಿರುವ ತೊಂದರೆಗಳೇನು (ಮಾಹಿತಿ ನೀಡುವುದು);

ಡಾ: ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) 2012–13, 2013–14 ಹಾಗೂ 2014–15ನೇ ಸಾಲಿನಲ್ಲಿ ಮುಖ್ಯ ಇಂಜಿನಿಯರ್, ದಕ್ಷಿಣ ವಲಯದಿಂದ ಸೊರಬ ವಿಧಾನಸಭಾ ಕ್ಷೇತ್ರದ ರಸ್ತೆ ಮತ್ತು ಸೇತುವೆ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಿದ ಅನುದಾನದ ವಿವರ ಕೆಳಕಂಡಂತಿದೆ

ವರ್ಷ	ಬಿಡುಗಡೆ ಮಾಡಿದ ಅನುದಾನ
2012–13	1129.29
2013–14	988.12
2014–15	569.39

ಲೆಕ್ಕ ಶೀರ್ಷಿಕೆವಾರು ಹಾಗೂ ವರ್ಷವಾರು ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಿದೆ.

ಆ) ಬಂದಿದೆ.

ಇ) ಸೊರಬ ವಿಧಾನಸಭಾ ವ್ಯಾಪ್ತಿಯ ಸೊರಬ ಪಟ್ಟಣ ಪರಿಮಿತಿಯಲ್ಲಿ ಕುಮುಟ–ಕಡಮಡಗಿ (ರಾಜ್ಯ ಹೆದ್ದಾರಿ–48) ರಸ್ತೆಯು ಕಿ.ಮೀ. 99.357 ರಿಂದ 102.00 ಕಿಮೀ. ವರೆಗೆ ಒಟ್ಟು 2.643 ಕಿಮೀ ಹಾದುಹೋಗಿದ್ದು, ಇದರಲ್ಲಿ 1.697 ಕಿಮೀ ಉದ್ದದ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಹಾಗೂ 0.476 ಕಿ.ಮೀ. ಉದ್ದದ ರಸ್ತೆಯನ್ನು ದ್ವಿಪಥ (7.00ಮೀ) ರಸ್ತೆಯನ್ನಾಗಿಯೂ ಅಭಿವೃದ್ಧಿ ಪಡಿಸಲಾಗಿರುತ್ತದೆ. ಸದರಿ ರಸ್ತೆಯ ಕಿ.ಮೀ. 100.180 ರಿಂದ 100.65 ವರೆಗಿನ ರಸ್ತೆ ಭಾಗದ ಕಾಮಗಾರಿ ಭೂ–ಸ್ವಾಧೀನ ಪ್ರಕ್ರಿಯೆ ಹಿನ್ನೆಲೆಯಲ್ಲಿ ವಿಳಂಬವಾಗಿರುತ್ತದೆ. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ಕಾಮಗಾರಿ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು.

ಸೊರಬ ಪಟ್ಟಣದ ಮುಖ್ಯ ರಸ್ತೆ ಅಗಲೀಕರಣಕ್ಕಾಗಿ ನಿಗಧಿಪಡಿಸಿರುವ ಅನುದಾನ ಹಾಗೂ ಸರಪಳಿಯ ವಿವರಗಳನ್ನು ಅನುಬಂಧ–2ರಲ್ಲಿ ಒದಗಿಸಿದೆ.

ಈ) ಸೊರಬ ಪಟ್ಟಣದ ಮುಖ್ಯ ರಸ್ತೆಯ ಅಗಲೀಕರಣ ರಸ್ತೆ ಭಾಗದ ಭೂ–ಸ್ವಾಧೀನ ಪ್ರಕ್ರಿಯ ಪ್ರಗತಿಯಲ್ಲಿದ್ದು, ಸದರಿ ಪ್ರಕ್ರಿಯೆ ಪೂರ್ಣಗೊಂಡ ನಂತರ ತುರ್ತಾಗಿ ಚತುಷ್ಪಥ ರಸ್ತೆಯನ್ನಾಗಿ ಅಗಲೀಕರಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲಾಗುವುದು.

ಅನುಬಂಧ-1 (ಪ್ರಶ್ನೆ ಸಂ 5420)

ಸೊರಬ ವಿಧಾನಸಭಾ ಕ್ಷೇತ್ರಕ್ಕೆ 2012-13, 2013-14 ಮತ್ತು 2014-15ನೇ ಸಾಲಿನಲ್ಲಿ ಒದಗಿಸಿದ ಅನುದಾನದ ವಿಕ್ಷಿಪೀಕರಣದ ವಿವರ

-1-

ಶೀ ಸಂ	ಸಾಮಾನ್ಯ ಯೋಜನೆ (ರಕ್ಷ ಕೀರ್ಷಿಕೆ)	2012-13		2013-14		2014-15	
		ಅನುದಾನ	ವೆಚ್ಚ	ಅನುದಾನ	ವೆಚ್ಚ	ಅನುದಾನ	ವೆಚ್ಚ
	5054- ರಸ್ತೆ ಮತ್ತು ಸೇತುವೆಗಳು (ಯೋಜನೆ)						
	5054-03-337-0-84-172 ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಕೆಶಿಪ್-II) ಇಎಸ - ರಸ್ತೆಗಳು (1074-129)			150 06	150 06		
	5054-03-337-0-16- ರಾಜ್ಯ ಹೆದ್ದಾರಿ ಸೇತುವೆಗಳು (ಯೋಜನೆ)						
	5054-03-337-0-16-154 - ಸುಧಾರಣೆಗಳು	107 60	107 60	94 73	94 73	14 17	14 17
	5054-03-337-0-16-160 - ನವೀಕರಣ	26 45	26 45				
	5054-03-337-0-17- ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳು (ಯೋಜನೆ)						
	5054-03-337-0-17-154 - ಸುಧಾರಣೆಗಳು	593 55	593 55	290 13	290 13	151 64	151 64
	5054-03-337-0-17-160 - ನವೀಕರಣ			24 32	24 32		
	5054-04-337-0-01 - ಜಿಲ್ಲಾ ಮತ್ತು ಇತರೆ ರಸ್ತೆಗಳು (ಯೋಜನೆ)						
	5054-04-337-0-01-154 - ಸುಧಾರಣೆಗಳು	321 73	321 73	241 23	241 23	331 16	331 16
	5054-04-337-0-01-160 - ನವೀಕರಣ	79 95	79 95	187 65	187 65	72 40	72 40

-2- ಅನುಬಂಧ-2

ಸೊರಬ ಮೈನರ್ ವ್ಯಾಲಿಯ ಪುನರ್ವಸತಿ-ಪುನರ್ನಿರ್ಮಾಣ ಮತ್ತು ಆಧುನೀಕರಣ ಯೋಜನೆ ವಿವರಗಳು
(ಕಿಮೀ 99.357 ರಿಂದ 101.00 ವರೆಗೆ ಒಟ್ಟು 2.643 ಕಿಮೀ ಉದ್ದ)

ಕ್ರಮ ಸಂಖ್ಯೆ	ಪ್ರಮುಖ ಕಾಮಗಾರಿಯ ವಿವರಗಳು	ಅಳತೆಗಳಿಗೆ	ಅಂದಾಜು / ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಉಲ್ಲೇಖ ಮಾರ್ಗಸೂಚಿ ಸಂಖ್ಯೆ	ಅಳವಡಿಸಿದ ದರ್ಜೆ (ಕಿ.ಮೀ.ಗಳಲ್ಲಿ)	ಪ್ರಸ್ತಾವಿತ ದರ್ಜೆ (ಕಿ.ಮೀ.ಗಳಲ್ಲಿ)	ಅಳವಡಿಸಿದ ದರ್ಜೆ ಮತ್ತು ಪ್ರಸ್ತಾವಿತ ದರ್ಜೆ ನಡುವಿನ ವ್ಯತ್ಯಾಸ (ಕಿ.ಮೀ.ಗಳಲ್ಲಿ)	ಅಂದಾಜು ಪತ್ರ	ಯಾ ಪ್ರಸ್ತಾವನೆ ಸ್ಥಳದ ಮಾಹಿತಿ
1	2	3	4	5	6	7	8	9	10	11
1)	ಸೊರಬ ಶಾಖಾ ಕಾಲುವೆ-ಅಯಕಟ್ಟಿನ ಪ್ರದೇಶ 99.10 ರಿಂದ 100.60 (59.60)ವರೆಗೆ ಚಾಲ್ತಿಯಲ್ಲಿರುವ ಪ್ರದೇಶದ ಪುನರ್ನಿರ್ಮಾಣ. (ಹಳೇ ಸೊರಬ ಲೈಬ್ರರಿಯಿಂದ ತಹಸೀಲ್ದಾರ್ ಕಛೇರಿ ಪ್ರದೇಶ ಹಾಗೂ ಸೊರಬ ಪಟ್ಟಣದ ಪ್ರದೇಶ)	ಮೀ	200.00	ಸಿ.ಡಬ್ಲ್ಯೂ.ಸಿ ಸಂ.776/11-12	171.03	0.347	0.347	0.00	ಪ್ರಸ್ತಾವನೆಯ ಪ್ರಕಾರ ಅಂದಾಜಿನ ಪ್ರಕಾರ ಗುತ್ತಿಗೆಯಂತೆ	
2)	ಕಿಮೀ 100.00-ಕಿ.ಮೀ.0.30 ಸೇತುವೆಗೆ (ಸೊರಬ-ಹಿರೇಜಂಬಗಿ ಮಧ್ಯದಲ್ಲಿ ರಸ್ತೆಯಲ್ಲಿ ಸೇತುವೆ ನಿರ್ಮಾಣ)	ಸಂಖ್ಯೆ	-		-	0.475	0.475	0.000	ಸಣ್ಣ ಮೇಜರ್ ಡಿವಿಷನ್ ಸೊರಬ ಇವರು ಮಾಡಿದ ಅಂದಾಜು ಪತ್ರ ಪ್ರಕಾರ ಅಂದಾಜಿನಲ್ಲಿ ಪ್ರಸ್ತಾವಿತ ಕಾಮಗಾರಿ	ಕಾಮಗಾರಿಯು ಕಿಮೀ 100.30 ರಿಂದ ಕಿಮೀ 100.60 ವರೆಗಿದ್ದು ಸೊರಬ-ಹಿರೇಜಂಬಗಿ ಮಧ್ಯದಲ್ಲಿ ಸೊರಬ-ಸೂರಲಿ ಮುಖ್ಯರಸ್ತೆಯ ಪಕ್ಕದಲ್ಲಿ ಒಟ್ಟು 182.94 ಲಕ್ಷಗಳ ವೆಚ್ಚ ಅಂದಾಜಿರುವ ಒಟ್ಟು 7, ಮೇಜರ್‌ಗಳ ಒಟ್ಟು 12 ಇರುವ ಸೇತುವೆಯ ವಿಸ್ತರಣೆಯ ಕಾರ್ಯ ಇದಾಗಿದ್ದು ಹಾಲಿ ಇರುವ ಸೇತುವೆಯ ಪಕ್ಕದಲ್ಲಿಯೇ ಹೊಸ ಸೇತುವೆಯನ್ನು ನಿರ್ಮಿಸಲಾಗುವುದು. ಸೇತುವೆಯ ಒಟ್ಟು ಉದ್ದ 60.00 ಮೀ ಇದ್ದು ಅಗಲ 10.50 ಮೀ ಇರುತ್ತದೆ. ಸೇತುವೆಯ ಎರಡೂ ಕಡೆ ತಲಾ 7.50 ಮೀ ಅಗಲದ ರಸ್ತೆಯಿರುತ್ತದೆ. ಸೇತುವೆಯ ಒಟ್ಟು ಅಗಲ 10.50 ಮೀ ಇರುತ್ತದೆ. ಸೇತುವೆಯ ಎರಡೂ ಕಡೆ ತಲಾ 1.50 ಮೀ ಅಗಲದ ಫುಟ್‌ಪಾತ್